# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ.. ಕನ್ನಡ ವಾರಪತ್ರಿಕೆ

**ಸುಭಾಷಿತ:**
ಮನಸ್ಸು ನಿನ್ನನ್ನು ನಿಯಂತ್ರಿಸುವ ಮೊದಲು
ಮನಸ್ಸನ್ನು ನೀನು ನಿಯಂತ್ರಣದಲ್ಲಿಟ್ಟುಕೊಳ್ಳು..
ಸೂರ್ಯ ಚಂದ್ರರಂತೆ ಜಗತ್ತಿಗೆ ನೀನು
ಬೆಳಕಾಗುವುದು ಬೇಡ. ನಿನ್ನ ಬದುಕಿಗೆ ನೀನು
ಬೆಳಕಾಗು ಸಾಕು.. ಆಗ ನಿನ್ನ ಬದುಕು ಧನ್ಯ..
ಒಂಟಿಯಾದೆ ಎಂದು ಕೊರಗಬೇಡ
ನೀನು ಬರುವಾಗಲು ಒಂಟಿ. ಹೋಗುವಾಗಲು
ಒಂಟಿ.. ನೀನು ಒಂಟಿಯಾದಾಗಲೇ ನಿನ್ನ
ಸಾಮರ್ಥ್ಯ ತೋರಿಸುವ ಸಮಯ ಬರುವುದು..
**ಭಗವಾನ್ ಶ್ರೀಕೃಷ್ಣ**



PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 04-09-2026 to 10-09-2026 ಬೆಲೆ:10-00 ಸಂಪುಟ–1 ಸಂಚಿಕೆ–49 ಪುಟಗಳು–6









ಸಾಲು ಸಾಲು ಹಬ್ಬಗಳ ಸಂಭ್ರಮ ಮನೆ ಮಾಡಿರುವ ಈ ಸಮಯದಲ್ಲಿ, ಮಾರುಕಟ್ಟೆಯಲ್ಲಿ ಹಣ್ಣು ಮತ್ತು ತರಕಾರಿಗಳ ಮಾರಾಟ ಜೋರಾಗಿದೆ. ಬೇಡಿಕೆಗೆ ತಕ್ಕಂತೆ ಇಳುವರಿ ಹಾಗೂ ಕೀಟಗಳಿಂದ ರಕ್ಷಿಸಲು ಬೆಳೆಗಾರರು ಅತಿಯಾದ ರಾಸಾಯನಿಕ ಹಾಗೂ ಕೀಟನಾಶಕಗಳನ್ನು ಬಳಸುವುದು ಸರ್ವೆಸಾಮಾನ್ಯವಾಗಿದೆ. ಅದರೊಂದಿಗೆ ಇದರ ತಾಜಾತನ ಉಳಿಸಿಕೊಳ್ಳಲು ವ್ಯಾಪಾರಿಗಳು ಕೂಡ ರಾಸಾಯನಿಕವನ್ನು ಬಳಸುತ್ತಿರುವುದು ಗಮನಕ್ಕೆ ಬರುತ್ತಿದೆ. ಈ ರಾಸಾಯನಿಕಗಳು ನಮ್ಮ ದೇಹ ಸೇರಿ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿರುವುದರಿಂದ ಮಾರುಕಟ್ಟೆಯಿಂದ ತಂದ ತರಕಾರಿ ಮತ್ತು ಹಣ್ಣುಗಳನ್ನು ಬಳಸುವ ಮುನ್ನ ಕನಿಷ್ಠ 15–20 ನಿಮಿಷಗಳ ಕಾಲ ಉಪ್ಪು ಅಥವಾ ವಿನೆಗರ್ ಬೆರೆಸಿದ ನೀರಿನಲ್ಲಿ ನೆನೆಸಿ, ಬಳಿಕ ಸ್ವಚ್ಛವಾದ ಹರಿಯುವ ನೀರಿನಲ್ಲಿ ಚೆನ್ನಾಗಿ ತೊಳೆಯುವುದು ಅತ್ಯಗತ್ಯ.

## ಅಯೋಧ್ಯೆ ರಾಮಮಂದಿರ ಟ್ರಸ್ಟ್‌ಗೆ ಪ್ರಥಮ ಸಿಇಒ ಆಯ್ಕೆ!



ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಆಡಳಿತ ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಸುಧಾರಿಸುವ ನಿಟ್ಟಿನಲ್ಲಿ ಭಾರತೀಯ ವಾಯುಪಡೆಯ ನಿವೃತ್ತ ಏರ್ ಮಾರ್ಷಲ್ ಜಿತೇಂದ್ರ ಮಿಶ್ರಾ ಅವರನ್ನು ಶ್ರೀರಾಮ ಮಂದಿರದ ಪ್ರಥಮ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ(ಸಿಇಒ) ನೇಮಕ ಮಾಡಲಾಗಿದೆ. ದೇವಾಲಯದ ಕಾಣಿಕೆ ಹಣದಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ಮತ್ತು ಕಳ್ಳತನದ ಆರೋಪಗಳ ವಿವಾದದ ಹಿನ್ನೆಲೆಯಲ್ಲಿ ನಡೆದ ಟ್ರಸ್ಟ್‌ನ ನಿರ್ಣಾಯಕ ಸಭೆಯಲ್ಲಿ **3ನೇ ಪುಟಕ್ಕೆ**

## ಸಂಪುಟ ಸಭೆ ಅಭಿವೃದ್ಧಿಯ ನೀಲಿನಕ್ಷೆಯಾಗಲಿ..

**ಮಂಗಳೂರು:** ಬೆಂಗಳೂರು ಹಾಗೂ ಬೆಳಗಾವಿಯಂತಹ ಸಾಂಪ್ರದಾಯಿಕ ಆಡಳಿತ ಕೇಂದ್ರಗಳ ಸೀಮಿತ ಪರಿಧಿಯಿಂದ ಹೊರಬಂದು, ಸೆಪ್ಟೆಂಬರ್ 18ರಂದು ಮಂಗಳೂರಿನಲ್ಲಿ ನಡೆಯಲಿರುವ ರಾಜ್ಯ ಸಚಿವ ಸಂಪುಟ ಸಭೆಯು ಕರಾವಳಿ ಕರ್ನಾಟಕದ ದಶಕಗಳ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸೂಚನಾ ಟಿಪ್ಪಣಿಯೊಂದಿಗೆ ಕರಾವಳಿಯ ಪ್ರಮುಖ ಪ್ರಸ್ತಾವನೆಗಳಿಗೆ ಸಭೆಯಲ್ಲಿ ಅಗ್ರಸ್ಥಾನ ಸಿಗುವ ಸಾಧ್ಯತೆಯಿರುವುದು ಈ ಭಾಗದ ಜನತೆಯಲ್ಲಿ ಹೊಸ ಆಶಾಭಾವನೆ ಮೂಡಿಸಿದೆ. ಸ್ಥಳದಲ್ಲೇ ಕುಳಿತು ಕರಾವಳಿಯ ನೈಜ ಸಮಸ್ಯೆಗಳನ್ನು ನೇರವಾಗಿ ಅರಿತುಕೊಂಡು ತ್ವರಿತ ನಿರ್ಧಾರಗಳನ್ನು ಕೈಗೊಳ್ಳಲು ಸಚಿವ ಸಂಪುಟದ ಸ್ಥಳೀಯ ಉಪಸ್ಥಿತಿಯು ಅತ್ಯಂತ ಸಹಕಾರಿಯಾಗಲಿದೆ. **3ನೇ ಪುಟಕ್ಕೆ**




## ರಾಜ್ಯದಲ್ಲಿ 'ಲಂಚ ಗ್ಯಾರಂಟಿ' ಆಡಳಿತ ಚುರುಕಾಗಿದೆ –ಡಾ.ಭರತ್ ಶೆಟ್ಟಿ

**ಮಂಗಳೂರು:** ರಾಜ್ಯದಲ್ಲಿ ಪ್ರಸ್ತುತ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದ್ದು, ಸರ್ಕಾರದಾದ್ಯಂತ 'ಲಂಚ ಗ್ಯಾರಂಟಿ' ಆಡಳಿತ ಮಾತ್ರವೇ ಅತ್ಯಂತ ಚುರುಕಾಗಿ ನಡೆಯುತ್ತಿದೆ ಎಂದು ಶಾಸಕ ಭರತ್ ಶೆಟ್ಟಿ ತೀವ್ರವಾಗಿ ವ್ಯಂಗ್ಯವಾಡಿದ್ದಾರೆ. ಮಂಗಳೂರಿನ ಕೊಡಿಯಾಲ್‌ಬೈಲ್ ನಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಆಯೋಜಿಸಲಾಗಿದ್ದ ವಿಶೇಷ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಮಂತ್ರಿಗಳಿಗೆ ನಿಗದಿತ ಕಮಿಷನ್ ತಲುಪಿಸುವ ಏಕೈಕ ಉದ್ದೇಶದಿಂದ ಅಧಿಕಾರಿಗಳು **3ನೇ ಪುಟಕ್ಕೆ**










ಕರಾವಳಿ ತರಂಗಿಣಿ

# ಕಲಾ ತರಂಗಿಣಿ



## ಅನಿರೀಕ್ಷಿತ ಅತಿಥಿಗಳು ಟ್ರೇಲರ್‌ಗೆ ಪ್ರಮೋದ್ ಶೆಟ್ಟಿ ಮೆಚ್ಚುಗೆ

ಇದೇ ಸೆಪ್ಟೆಂಬರ್ 18ರಂದು ತೆರೆಕಾಣಲಿರುವ ಚಿತ್ರ ಅನಿರೀಕ್ಷಿತ ಅತಿಥಿಗಳು. ಚಿತ್ರದ ಟ್ರೇಲರ್ ರಿಲೀಸ್ ಮಾಡಿದ ಖ್ಯಾತ ನಟ ಪ್ರಮೋದ್ ಶೆಟ್ಟಿ ಬಾಯಿಬಿಟ್ಟುಂಬ ಮೆಚ್ಚುಗೆ ಮಾತುಗಳನ್ನಾಡಿದ್ದಾರೆ. ಈ ಚಿತ್ರತಂಡದವರು ನನಗೆ ರಂಗಭೂಮಿ ದಿನಗಳಿಂದಲೇ ಪರಿಚಯ. ಅದರಲ್ಲೂ ಅನಿರೀಕ್ಷಿತ ಅತಿಥಿಗಳು ಚಿತ್ರದ ಕಾರ್ಯವೈಖರಿ ಬಗ್ಗೆ ಬೇರೆ ಬೇರೆ ಸಿನಿಮಾ ತಂತ್ರಜ್ಞರು ಹೊಗಳಿಕೆಯ ಮಾತನಾಡುತ್ತಿರುವುದು ನಿಜಕ್ಕೂ ಉತ್ತಮ ಸೂಚನೆಯಾಗಿದೆ ಎಂದರು. ಟ್ರೇಲರ್ ನಲ್ಲಿ ಕಾಡಿನ ಮಧ್ಯೆ ಇರುವ ಒಂಟಿ ಮನೆಯೊಂದನ್ನು ಕಂಡ ಪ್ರಮೋದ್ ಶೆಟ್ಟಿ "ಇದೇ ಮನೆಯಲ್ಲೇ ರಿಷಬ್ ನಟನೆಯ 'ಹೀರೋ' ಸಿನಿಮಾ ಚಿತ್ರೀಕರಣ ಮಾಡಲಾಗಿತ್ತು. ಅದು ನಮಗೆ ಗೆಲುವು ತಂದುಕೊಟ್ಟಿತ್ತು. ಆ ಮನೆಯಲ್ಲಿ ಅಂಥ ಪಾಸಿಟಿವ್ ಎನರ್ಜಿ ಇದೆ. ನಿಮಗೂ ಅದರ ಗೆಲುವು ಸಿಗಲಿ" ಎಂದು ಶುಭ ಹಾರೈಸಿದರು. ಅನಿರೀಕ್ಷಿತ ಅತಿಥಿಗಳು ಚಿತ್ರವನ್ನು ಬರೆದು ನಿರ್ದೇಶಿಸಿರುವ ಮನೋಜ್ ಅಣ್ಣಯ್ಯ ಮಾತನಾಡಿ, ಈ ಚಿತ್ರಕ್ಕೆ ಎ ಸರ್ಟಿಫಿಕೇಟ್ ಸಿಕ್ಕಿದೆ. ಆದರೆ ಚಿತ್ರ ನೋಡುವ ಪ್ರೇಕ್ಷಕರು ತಮ್ಮ ಬದುಕಿನಲ್ಲಿ ನಡೆದ ಘಟನೆಗಳನ್ನು ನೆನಪಿಸಿಕೊಳ್ಳುವಂಥ ಚಿತ್ರ ಇದು. ಮಾತ್ರವಲ್ಲ ನಮ್ಮ ಬದುಕಿನಲ್ಲಿ ಕೆಲವು ಘಟನೆಗಳು ನಡೆಯಬಾರದು ಎಂದಾದರೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳೇನು ಎನ್ನುವ ಸಂದೇಶ ಈ ಚಿತ್ರದಲ್ಲಿದೆ, ನಿರ್ಮಾಪಕ ಬಿ ವಿನೋದ್ ಮಾತನಾಡಿ ತಮಗೆ ನಟನೆಯ ಆಸಕ್ತಿ ಮೊದಲೇ ಇತ್ತು ಎಂದರು.



## ಬಾಲಿವುಡ್‌ಗೆ ಅಡಿಯಿಟ್ಟ ಆರ್ ಚಂದ್ರು

ವಿನೂತನ ಪ್ರಯತ್ನಗಳಿಂದ ಹೆಸರಾಗಿರುವ ಕನ್ನಡದ ಸ್ಟಾರ್ ನಿರ್ದೇಶಕ ಹಾಗೂ ನಿರ್ಮಾಪಕ ಆರ್ ಚಂದ್ರು ಈಗ ಬಾಲಿವುಡ್‌ಗೆ ನಿರ್ಮಾಪಕರಾಗಿ ಅಡಿಯಿಟ್ಟಿದ್ದಾರೆ. ಬಾಲಿವುಡ್‌ನಲ್ಲಿ ಸಾಕಷ್ಟು ಹೆಸರು ಮಾಡಿರುವ ಆನಂದ್ ಪಂಡಿತ್ ಅವರೊಡಗೂಡಿ ಹಿಂದಿ ಚಿತ್ರವನ್ನು ನಿರ್ಮಿಸಲು ಮುಂದಾಗಿದ್ದಾರೆ. ಹಿಂದಿ ಮಾತ್ರವಲ್ಲದೆ ಕನ್ನಡ ಸೇರಿದಂತೆ ಹಲವು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಕನ್ನಡದಲ್ಲಿ ಕರುನಾಡ ಚಕ್ರವರ್ತಿ ಶಿವರಾಜಕುಮಾರ್ ಮತ್ತು ತೆಲುಗಿನಲ್ಲಿ ಸುನೀಲ್ ಅವರು ನಾಯಕರಾಗಿ ನಟಿಸುತ್ತಿದ್ದು, ಹಿಂದಿ, ತಮಿಳು ಹಾಗೂ ಮಲಯಾಳಂನಲ್ಲೂ ಸುಪ್ರಸಿದ್ಧ ಸ್ಟಾರ್ ನಟರು ನಾಯಕರಾಗಿ ನಟಿಸುತ್ತಿದ್ದಾರೆ. ಅವರು ಯಾರು ಎಂಬುದು ಸದ್ಯದಲ್ಲೇ ತಿಳಿಯಲಿದೆ. ಎರಡೂವರೆ ವರ್ಷಗಳ ಹಿಂದೆ ಆರ್ ಚಂದ್ರು ನೂರಾರು ಕೋಟಿ ವೆಚ್ಚದಲ್ಲಿ ಆನಂದ್ ಪಂಡಿತ್ ಅವರೊಂದಿಗೆ 'ಕಬ್ಜ' ಎಂಬ ಸೂಪರ್ ಹಿಟ್ ಪ್ಯಾನ್ ಇಂಡಿಯಾ ಚಿತ್ರವನ್ನು ನಿರ್ಮಾಣ ಮಾಡಿದ್ದರು. ಆ ಚಿತ್ರ ಚಂದ್ರು ಅವರಿಗೆ ಹೆಸರು ಹಾಗೂ ಹಣ ಎರಡನ್ನು ತಂದುಕೊಟ್ಟಿತು. ಅದಲ್ಲದೆ ಪ್ರಪಂಚದಾದ್ಯಂತ ಈ ಚಿತ್ರ ಸುದ್ದಿ ಮಾಡಿತ್ತು. ಈ ಚಿತ್ರದ ನಂತರ ಆರ್ ಚಂದ್ರು ಏನು ಮಾಡುತ್ತಿದ್ದಾರೆ? ಎಂಬ ಪ್ರಶ್ನೆ ಎಲ್ಲರಲ್ಲೂ ಇತ್ತು. ಸಿನಿಮಾವನ್ನೇ ಉಸಿರಾಗಿಸಿಕೊಂಡಿರುವ ಆರ್ ಚಂದ್ರು ಅವರು 'ಕಬ್ಜ' ನಂತರ ಈ ಅದ್ದೂರಿ ಚಿತ್ರದ ನಿರ್ಮಾಣಕ್ಕೆ ಸಿದ್ಧತೆ ನಡೆಸಿಕೊಳ್ಳುತ್ತಿದ್ದರು. ಕನ್ನಡದ ಹೆಸರಾಂತ ನಿರ್ದೇಶಕ ಹಾಗೂ ನಿರ್ಮಾಪಕ ಆರ್. ಚಂದ್ರು, ಕನ್ನಡದ ಜನಪ್ರಿಯ ನಟರಾದ ಶಿವರಾಜಕುಮಾರ್ ಅವರ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ ಈ ನೂತನ ಪ್ಯಾನ್ ಇಂಡಿಯಾ ಚಿತ್ರದ ಆರಂಭೋತ್ಸವವನ್ನು ಬಾಲಿವುಡ್‌ನ ಕೇಂದ್ರ ಸ್ಥಳವಾದ ಮುಂಬೈನಲ್ಲಿ ಅದ್ದೂರಿಯಾಗಿ ಮಾಡಿದ್ದಾರೆ. ಈ ನೂತನ ಚಿತ್ರಕ್ಕೆ 'ಒರಿಜಿನಲ್ ಮಾನ್ ಸ್ಟರ್' ಎಂಬ ಯುನಿವರ್ಸಲ್ ಟೈಟಲ್ ಇಡಲಾಗಿದ್ದು, ಎಲ್ಲಾ ಭಾಷೆಗೂ ಈ ಶೀರ್ಷಿಕೆ ಹೊಂದಿಕೆಯಾಗುತ್ತದೆ. ಇದನ್ನು ಕಿರಿದಾಗಿ 'OM' ಎಂದು ಸಹ ಕರೆಯಬಹುದು. 'OM' ಎಂದರೆ ಶಿವಣ್ಣ ಅಭಿನಯದ 'ಓಂ' ಕೂಡ ನೆನಪಾಗುತ್ತದೆ ಎಂದರು.



## ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಅಮೆರಿಕಾ ಅಮೆರಿಕಾ 2' ಟ್ರೈಲರ್ ಅನಾವರಣ

ಅಮೆರಿಕಾ ಅಮೆರಿಕಾ, ನನ್ನ ಪ್ರೀತಿಯ ಹುಡುಗಿ, ಅಮೃತಧಾರೆ, ಮಾತಾಡ್ ಮಾತಾಡ್ ಮಲ್ಲಿಗೆ ಸೇರಿದಂತೆ ಹಲವು ಯಶಸ್ವಿ ಚಿತ್ರಗಳನ್ನು ಕನ್ನಡಿಗರಿಗೆ ನೀಡಿದ ಡಾ.ನಾಗತಿಹಳ್ಳಿ ಚಂದ್ರಶೇಖರ್ ಅವರ ನಿರ್ದೇಶನದ ಮತ್ತೊಂದು ಚಿತ್ರ 'ಅಮೆರಿಕಾ ಅಮೆರಿಕಾ -2' ಬಿಡುಗಡೆಗೆ ಸಿದ್ದವಾಗಿದೆ. ನಿರೂಪ್ ಭಂಡಾರಿ, ಪೃಥ್ವಿ ಅಂಬರ್, ಶಾನ್ವಿ ಶ್ರೀವಾತ್ಸವ್ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಸಮಾರಂಭ ಮೈಸೂರಿನಲ್ಲಿ ನಡೆಯಿತು. ನಟ ಡಾಲಿ ಧನಂಜಯ ಟ್ರೈಲರ್ ಅನಾವರಣ ಮಾಡಿದರು. 'ಅಮೆರಿಕಾ ಅಮೆರಿಕಾ-2' 'ಅಮೇರಿಕಾ ಅಮೇರಿಕಾ' ಚಿತ್ರದ ಮುಂದುವರಿದ ಭಾಗವಲ್ಲ, ನುಡಿ, ನಿನಾದ್, ನೀಲ್ ಹಿಂದಿನ ಮೂರು ಪಾತ್ರಗಳನ್ನು ಪ್ರತಿಬಿಂಬಿಸುತ್ತವೆ. ಮೈಸೂರಿನ ಚಿಕ್ಕ ಕಥೆಯನ್ನು ಇಟ್ಟುಕೊಂಡು ಮಾಡಿದಂಥ ಚಿತ್ರವಿದು. ಕಾರ್ಯಕ್ರಮವನ್ನು ಉದ್ಘಾಟಿಸಿದ ಎ.ಪಿ ಜ್ಞಾನ ಪ್ರಕಾಶ್ (ಮುಕ್ತ ವಿವಿ ಉಪಕುಲಪತಿಗಳು), ಈ ಚಿತ್ರ ಮತ್ತೊಮ್ಮೆ ಕೀರ್ತಿಪತಾಕೆ ಹಾರೈಸಲಿ ಎಂದು ಹಾರೈಸಿದರು. ಟ್ರೈಲರ್ ಬಿಡುಗಡೆ ಮಾಡಿದ ಡಾಲಿ ಧನಂಜಯ್ ಮಾತನಾಡುತ್ತ ಮೈಸೂರಲ್ಲಿ ಟ್ರೈಲರ್ ರಿಲೀಸ್ ಆಗುತ್ತಿರುವುದಕ್ಕೆ ಖುಷಿಯಾಗುತ್ತಿದೆ. ನಾಗತಿಹಳ್ಳಿ ಚಂದ್ರಶೇಖರ್ ಅವರು ದೊಡ್ಡ ಬೇರು, ಅಂದಿನಿಂದ ಇವತ್ತಿನವರೆಗೂ ಒಳ್ಳೊಳ್ಳೆ ಸಿನಿಮಾಗಳನ್ನು ಮಾಡುತ್ತಾ ಬಂದಿದ್ದಾರೆ ಎಂದರು.



## ರಂಗ ಜಂಗಮ ಬಿ. ವಿ. ಕಾರಂತರ ಸ್ಮರಣೆ

ಭಾರತೀಯ ರಂಗಭೂಮಿಗೆ ಅನನ್ಯ ಕೊಡುಗೆಯನ್ನಿತ್ತ ಬಿ.ವಿ.ಕಾರಂತ ಅವರ ರಂಗ ಪರಂಪರೆಯನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ದಿಸೆಯಲ್ಲಿ ತೊಡಗಿಸಿಕೊಂಡಿರುವ 'ಬೆನಕ' ರಂಗ ತಂಡದೊಂದಿಗೆ ಅಂತಾರಾಷ್ಟ್ರೀಯ ಖ್ಯಾತಿವೆತ್ತ ಟೆಕ್ ಸಂಸ್ಥೆ 'ಟೆಕಿಯಾನ್' ಕೈಜೋಡಿಸಿದೆ. ಕರ್ನಾಟಕದ ಶ್ರೀಮಂತ ರಂಗ ಪರಂಪರೆಯನ್ನು ಸಂರಕ್ಷಿಸುವ ಮತ್ತು ಪ್ರೋತ್ಸಾಹಿಸುವ ಉದ್ದೇಶದಿಂದ ಬೆನಕ ರಂಗ ತಂಡ ಮತ್ತು ಟೆಕ್ಕಿಯಾನ್ ಸಂಸ್ಥೆಯ ನಡುವಿನ ಪಾಲುದಾರಿಕೆಯಲ್ಲಿ 'ಕಾರಂತ ಮಾಸ' ರಂಗೋತ್ಸವವನ್ನು ಆಯೋಜಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಬೆನಕ ತಂಡವು ತನ್ನ ಕಲಾವಿದರು ಮತ್ತು ಸ್ನೇಹಿತರೊಂದಿಗೆ ಟೌನ್ ಹಾಲ್‌ನಿಂದ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದವರೆಗೆ 'ರಂಗಯಾತ್ರೆ'ಯನ್ನು ಹಮ್ಮಿಕೊಂಡಿತ್ತು. ಕಾರಂತರು ನಿರ್ದೇಶಿಸಿದ ನಾಟಕಗಳ ವಿವಿಧ ಪಾತ್ರಗಳ ವೇಷ ತೊಟ್ಟ ಕಲಾವಿದರ 'ರಂಗ ಯಾತ್ರೆ'ಯನ್ನು ಚಂಡೆ ವಾದ್ಯ ಮತ್ತು ಡೊಳ್ಳು ಕುಣಿತದೊಡನೆ ನಡೆಸಿ ಕಾರಂತ ಮಾಸದ ಧ್ವಜಗಳ ಭವ್ಯ ಅನಾವರಣ ಜರುಗಿತು. ಜೊತೆಗೆ 'ಕಾರಂತ ರಂಗ ಸಂಗೀತ ಸ್ಪರ್ಧೆ'ಯ ಘೋಷಣೆಯೂ ನಡೆಯಿತು. ಸಮಾರಂಭದಲ್ಲಿ ಬೆನಕ ಸಂಸ್ಥೆಯ ಅಧ್ಯಕ್ಷರಾದ ಡಾ.ಟಿ.ಎಸ್. ನಾಗಾಭರಣ, ಹಿರಿಯ ಕಲಾವಿದರಾದ ಸುಂದರ್ ರಾಜ್ ಅವರು ಉಪಸ್ಥಿತರಿದ್ದರು. ಪ್ರಸಕ್ತ ಸಾಲಿನ 'ಕಾರಂತ ಮಾಸ' ಆಚರಣೆಯಲ್ಲಿ ಹಮ್ಮಿಕೊಳ್ಳುವ ನಾಟಕ ಪ್ರದರ್ಶನಗಳು, ರಂಗ ಕಾರ್ಯಾಗಾರಗಳು, ಸಂಗೀತ ಮತ್ತು ಇತರೆ ಸಾಂಸ್ಕೃತಿಕ ಚಟುವಟಿಕೆಗಳ ವಿವರವನ್ನು ನೀಡಲಾಯಿತು.



## ಪಿ. ಸಮುದ್ರಖನಿ ನಿರ್ದೇಶನದ 'ಸ್ಕೂಲ್ ಬಸ್' ಚಿತ್ರದಲ್ಲಿ ಕಿಚ್ಚ ಸುದೀಪ್

ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅವರು ಖ್ಯಾತ ತಮಿಳು ನಿರ್ದೇಶಕ ಹಾಗೂ ನಟ ಪಿ. ಸಮುದ್ರಖನಿ ಮುಂಬರುವ 'ಸ್ಕೂಲ್ ಬಸ್' ಚಿತ್ರದಲ್ಲಿ ಪ್ರಮುಖ ಪಾತ್ರ ವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸೆಪ್ಟೆಂಬರ್ 2ರಂದು ಸುದೀಪ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಚಿತ್ರತಂಡ ಮಧ್ಯರಾತ್ರಿ ಅವರ ಫಸ್ಟ್ ಲುಕ್ ಪೋಸ್ಟರ್ ಬಿಡುಗಡೆ ಮಾಡುವ ಮೂಲಕ ಈ ಮಹತ್ವದ ಪ್ರಾಜೆಕ್ಟ್‌ನಲ್ಲಿ ಅವರು ಇರುವುದನ್ನು ಅಧಿಕೃತವಾಗಿ ಪ್ರಕಟಿಸಿದೆ. ಖ್ಯಾತ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅರ್ಪಿಸುತ್ತಿರುವ ಈ ಚಿತ್ರವು ಭಾರಿ ನಿರೀಕ್ಷೆಯನ್ನು ಹುಟ್ಟುಹಾಕಿದೆ. 'ನಾಡೋಡಿಗಲ್', 'ಅಪ್ಪ' ಮತ್ತು 'ವಿನೋದಯ ಸಿತಂ' ಮುಂತಾದ ಸದಭಿರುಚಿಯ ಚಿತ್ರಗಳ ಮೂಲಕ ಜನಪ್ರಿಯರಾಗಿರುವ ಪಿ. ಸಮುದ್ರಖನಿ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳುವುದರ ಜೊತೆಗೆ ಪ್ರಮುಖ ಪಾತ್ರದಲ್ಲೂ ಅಭಿನಯಿಸುತ್ತಿದ್ದಾರೆ. 22 ಮಕ್ಕಳ ಜವಾಬ್ದಾರಿ ಹೊತ್ತ ಶಾಲಾ ಬಸ್ ಚಾಲಕನೊಬ್ಬನ ಸುತ್ತ ಈ ಕಥೆ ಸಾಗಲಿದ್ದು, ಮಕ್ಕಳ ಭಾವನೆಗಳು, ಪೋಷಕರ ಕಳಕಳಿ ಹಾಗೂ ಶಿಕ್ಷಕರ ಬದುಕಿನ ವಿವಿಧ ಮಗ್ಗುಲುಗಳ ಮೇಲೆ ಬೆಳಕು ಚೆಲ್ಲಲಿದೆ.



## ನಿತ್ಯಾ ಮೆನನ್ ನಿರ್ಮಾಣ ಮತ್ತು ಅಭಿನಯದ 'ಪ್ರೊಡಕ್ಷನ್ ನಂ.5' ಸಿನಿಮಾ ಘೋಷಣೆ

ಖ್ಯಾತ ನಿರ್ಮಾಣ ಸಂಸ್ಥೆ 'ಲಿಯೋ ವಿಷನ್' ತನ್ನ ಐದನೇ ಸಿನಿಮಾವನ್ನು ಅಧಿಕೃತವಾಗಿ ಘೋಷಿಸಿದೆ. ಈ ವಿಶೇಷ ಚಿತ್ರದ ಮೂಲಕ ಬಹುಭಾಷಾ ನಟಿ ನಿತ್ಯಾ ಮೆನನ್ ಅವರು ತಮ್ಮ 'ಕೇಯೂರಿ ಪ್ರೊಡಕ್ಷನ್ಸ್ ಪ್ರೈವೇಟ್ ಲಿಮಿಟೆಡ್' ಬ್ಯಾನರ್ ಅಡಿಯಲ್ಲಿ ಸಹ-ನಿರ್ಮಾಪಕಿಯಾಗಿ ಕೈಜೋಡಿಸಿದ್ದು, ಚಿತ್ರರಂಗದಲ್ಲಿ ಹೊಸ ಸಂಚಲನ ಮೂಡಿಸಿದ್ದಾರೆ. ಫ್ಯಾಂಟಸಿ ಡಾರ್ಕ್ ಕಾಮಿಡಿ ಕಥಾಹಂದರ ಹೊಂದಿರುವ ಈ ವಿಶಿಷ್ಟ ಚಿತ್ರದಲ್ಲಿ ನಿತ್ಯಾ ಮೆನನ್ ಅವರೇ ಮುಖ್ಯ ಭೂಮಿಕೆಯಲ್ಲಿ ಅಭಿನಯಿಸುತ್ತಿದ್ದಾರೆ. 'ಡಿಕೆ' ಈ ಚಿತ್ರವನ್ನು ನಿರ್ದೇಶಿಸುತ್ತಿದ್ದು, ಖ್ಯಾತ ನಿರ್ದೇಶಕ ವಿಕ್ರಮ್ ಕೆ. ಕುಮಾರ್ ಅವರು ಈ ಯೋಜನೆಗೆ 'ಕ್ರಿಯೇಟಿವ್ ಪ್ರೊಡ್ಯೂಸರ್' ಆಗಿ ಜೋಡಿಸಿಕೊಂಡಿರುವುದು ಸಿನಿಮಾದ ಮೇಲಿನ ನಿರೀಕ್ಷೆಯನ್ನು ದ್ವಿಗುಣಗೊಳಿಸಿದೆ. ಚಿತ್ರಕ್ಕೆ ಎ. ಶಕ್ತಿವೇಲ್ ಅವರ ಛಾಯಾಗ್ರಹಣ ಹಾಗೂ ರಿಚರ್ಡ್ ಕೆವಿನ್ ಅವರ ಸಂಕಲನವಿರಲಿದೆ. ಲಿಯೋ ವಿಷನ್ ಸಂಸ್ಥೆಯ ವಿ.ಎಸ್. ರಾಜ್‌ಕುಮಾರ್ ಮತ್ತು ಕೇಯೂರಿ ಪ್ರೊಡಕ್ಷನ್ಸ್ ಸಂಸ್ಥೆಯ ನಿತ್ಯಾ ಮೆನನ್ ಜಂಟಿಯಾಗಿ ಈ ಬಿಗ್ ಬಜೆಟ್ ಸಿನಿಮಾವನ್ನು ನಿರ್ಮಿಸಿದ್ದಾರೆ.



## 'ಕಿಚ್ಚ' ಸುದೀಪ್ ಜನ್ಮದಿನಕ್ಕೆ ಭರ್ಜರಿ ಗಿಫ್ಟ್

ಅಭಿನಯ ಚಕ್ರವರ್ತಿ ಕಿಚ್ಚ ಸುದೀಪ್ ಅವರ ಜನ್ಮದಿನದ (ಸೆಪ್ಟೆಂಬರ್ 2) ಸಂಭ್ರಮದಲ್ಲಿರುವ ಕೋಟ್ಯಂತರ ಅಭಿಮಾನಿಗಳಿಗೆ ಅದ್ಭುತ ಉಡುಗೊರೆ ದೊರೆತಿದೆ. ಸುದೀಪ್ ಅವರ ಮುಂದಿನ ಬಹುನಿರೀಕ್ಷಿತ ಹಾಗೂ ಮಹತ್ವಾಕಾಂಕ್ಷೆಯ ಐತಿಹಾಸಿಕ ಪ್ರಾಜೆಕ್ಟ್ 'ದೇವರಾಯ' ಅಧಿಕೃತವಾಗಿ ಘೋಷಣೆಯಾಗಿದ್ದು, ಸಿನಿಪ್ರಿಯರ ಗಮನ ಸೆಳೆದಿದೆ. ತೆಲುಗಿನ ಖ್ಯಾತ ನಿರ್ಮಾಣ ಸಂಸ್ಥೆ 'ಪೀಪಲ್ ಮೀಡಿಯಾ ಫ್ಯಾಕ್ಟರಿ' ಹಾಗೂ ಪ್ರಿಯಾ ಸುದೀಪ್ ಒಡೆತನದ 'ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೋಸ್' ಜಂಟಿಯಾಗಿ ಈ ಬೃಹತ್ ಕ್ಯಾನ್ವಾಸ್‌ನ ಸಿನಿಮಾವನ್ನು ನಿರ್ಮಿಸಲು ಮುಂದಾಗಿವೆ. ವಿಜಯನಗರ ಸಾಮ್ರಾಜ್ಯವನ್ನು ಸುವರ್ಣ ಯುಗಕ್ಕೆ ಕೊಂಡೊಯ್ದು, ಸಾಹಸ, ಚಾಣಾಕ್ಷ ಆಡಳಿತ ಹಾಗೂ ಸಾಹಿತ್ಯ-ಕಲೆಗಳ ಪೋಷಣೆಗೆ ಹೆಸರಾದ ಚಕ್ರವರ್ತಿ ಶ್ರೀ ಕೃಷ್ಣದೇವರಾಯರ ಪಾತ್ರದಲ್ಲಿ ಸುದೀಪ್ ಬಣ್ಣ ಹಚ್ಚಲಿದ್ದಾರೆ. ಈ ಹಿಂದೆ ಕನ್ನಡ ಚಿತ್ರರಂಗದ ಮೇರು ನಟ ಡಾ.ರಾಜ್‌ಕುಮಾರ್ ಕೃಷ್ಣದೇವರಾಯರ ಪಾತ್ರವನ್ನು ಬೆಳ್ಳಿತೆರೆಯ ಮೇಲೆ ಅಜರಾಮರಗೊಳಿಸಿದ್ದರು.



## ಸುಮಂತ್ ಗೌಡ ನಿರ್ದೇಶನದ 'MR ಜಾಕ್' ಚಿತ್ರ ಅಕ್ಟೋಬರ್‌ನಲ್ಲಿ ತೆರೆಗೆ



'ಫಸ್ಟ್ rank ರಾಜು' ಚಿತ್ರದ ಮೂಲಕ ಅಭಿಮಾನಿಗಳ ಮನ ಗೆದ್ದಿರುವ ಗುರುನಂದನ್ ನಾಯಕರಾಗಿ ನಟಿಸಿರುವ 'MR. ಜಾಕ್' ಚಿತ್ರದ ಟೀಸರ್ ಆನಂದ್ ಆಡಿಯೋ ಯೂಟ್ಯೂಬ್ ಚಾನಲ್‌ನಲ್ಲಿ ಬಿಡುಗಡೆಯಾಗಿದೆ. ಸುಮಂತ್ ಗೌಡ ನಿರ್ದೇಶನದ ಈ ಚಿತ್ರವನ್ನು ಮಂಡಿಮನೆ ಟಾಕೀಸ್ ಲಾಂಛನದಲ್ಲಿ ಗುರುನಂದನ್ ಅವರು ತಮ್ಮ ಸ್ನೇಹಿತರೊಡಗೂಡಿ ನಿರ್ಮಿಸಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಅದ್ದೂರಿಯಾಗಿ ನೆರವೇರಿತು. ತಂಡದ ಸದಸ್ಯರು ಮಾತನಾಡಿದರು. 'MR ಜಾಕ್' ನಮ್ಮ ಸುತ್ತ ಮುತ್ತಲಿನಲ್ಲೇ ನಡೆಯುವ ಕಥೆ. ಈ ಚಿತ್ರದಲ್ಲಿ ಹಾಸ್ಯವೇ ಪ್ರಧಾನ. ಎಮೋಷನ್ ಸಹ ಇದೆ. ಅಷ್ಟೇ ಅಲ್ಲ ಈಗಿನ ಜನರು ಬಯಸುವ ಎಲ್ಲಾ ಅಂಶಗಳು ಚಿತ್ರದಲ್ಲಿದೆ. ಗುರುನಂದನ್ ನಾಯಕರಾಗಿ ಮತ್ತು ನಾಯಕಿಯಾಗಿ ತಪಸ್ವಿನಿ ಪೂಣಚ್ಚ ನಟಿಸಿದ್ದಾರೆ ಎಂದರು.

## ಪವನ್ ಒಡೆಯರ್-ಕೆವಿಎನ್ ಕಾಂಬಿನೇಷನ್‌ನಲ್ಲಿ ಸದ್ದು ಮಾಡುತ್ತಿದೆ ಖಾಕಿ ಖದರ್

ಕರುನಾಡ ಚಕ್ರವರ್ತಿ ಡಾ. ಶಿವರಾಜ್‌ಕುಮಾರ್ ನಟನೆಯ ಬಹುನಿರೀಕ್ಷಿತ 'ಬೇಲ್' ಚಿತ್ರದ ಅಧಿಕೃತ ಟೀಸರ್ ಬಿಡುಗಡೆಯಾಗಿದ್ದು, ಸೋಷಿಯಲ್ ಮೀಡಿಯಾದಲ್ಲಿ ಧೂಳೆಬ್ಬಿಸುತ್ತಿದೆ. ಚಿತ್ರರಂಗದ ಖ್ಯಾತ ನಿರ್ದೇಶಕ ಪವನ್ ಒಡೆಯರ್ ಆಕ್ಷನ್‌ಕಟ್ ಹೇಳಿರುವ ಈ ಚಿತ್ರದಲ್ಲಿ ಶಿವಣ್ಣ ಎಂದಿನ ತಮ್ಮ ಖಡಕ್ ಶೈಲಿಯ ಪವರ್ ಫುಲ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡು ಅಭಿಮಾನಿಗಳಲ್ಲಿ ಭಾರಿ ಕುತೂಹಲ ಮೂಡಿಸಿದ್ದಾರೆ. ಪ್ರತಿಷ್ಠಿತ 'ಕೆವಿಎನ್ ಪ್ರೊಡಕ್ಷನ್ಸ್' (KVN Productions) ಬ್ಯಾನರ್ ಅಡಿಯಲ್ಲಿ ವೆಂಕಟ್ ಕೆ. ನಾರಾಯಣ ಅವರು ಈ ಚಿತ್ರವನ್ನು ಅದ್ದೂರಿ ಬಜೆಟ್‌ನಲ್ಲಿ ನಿರ್ಮಿಸಿದ್ದು, ಕಥೆ, ಚಿತ್ರಕಥೆ, ಸಂಭಾಷಣೆಯನ್ನು ಖುದ್ದು ಪವನ್ ಒಡೆಯರ್ ಅವರೇ ಬರೆದಿದ್ದಾರೆ.



## ತಂದೆ-ಮಗಳ ಬಾಂಧವ್ಯದ 'ಪ್ಯಾರ್' ಟೀಸರ್ ಬಿಡುಗಡೆ

ಎಸ್.ಎಂ. ಪ್ರೊಡಕ್ಷನ್ಸ್ ಲಾಂಛನದಲ್ಲಿ ಹೆಚ್. ಎಸ್. ನಾಗಶ್ರೀ ಅವರ ನಿರ್ಮಾಣದ, ತಂದೆ ಮಗಳ ಬಾಂಧವ್ಯದ ಕಥಾನಕ ಒಳಗೊಂಡ 'ಪ್ಯಾರ್' ಚಿತ್ರವೀಗ ಬಿಡುಗಡೆಗೆ ಸಿದ್ದವಾಗಿದೆ. ಎಸ್. ಸುಪ್ರೀತ್ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿರುವ ಈ ಚಿತ್ರದಲ್ಲಿ ರಿಶ್ವಿನ್, ರಾಶಿಕಾ ಶೆಟ್ಟಿ ನಾಯಕ, ನಾಯಕಿಯಾಗಿ ನಟಿಸಿದ್ದು, ಕ್ರೇಜಿ ಸ್ಟಾರ್ ರವಿಚಂದ್ರನ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ನಡೆಯಿತು. ಈಗಾಗಲೇ ರಿಲೀಸಾಗಿರುವ 'ಒಂದೇ ಮಾತಲ್ಲಿ ಹೇಳೋದಾದರೆ' ಅತಿ ಹೆಚ್ಚು ವೀಕ್ಷಣೆಯಾಗಿದೆ. ಪಳನಿ ಡಿ. ಸೇನಾಪತಿ ಅವರ ಸಂಗೀತ, ಕೆ. ಎಸ್. ಚಂದ್ರಶೇಖರ್ ಅವರ ಕ್ಯಾಮೆರಾ ವರ್ಕ್ ಈ ಚಿತ್ರಕ್ಕಿದೆ. ನಿರ್ದೇಶಕ ಸುಪ್ರೀತ್ ಮಾತನಾಡುತ್ತ ಈ ಹಿಂದೆ ಒಂದೇ ಮಾತಲಿ ಹಾಗೂ ರಾಯಭಾರಿಯಾಗಿ ಎಂಬ 2 ಸಾಂಗ್ ಬಿಟ್ಟಿದ್ದೆವು ಎಂದರು..





ಕರಾವಳಿ ತರಂಗಿಣಿ

# ಸಿನಿ ತರಂಗಿಣಿ

## ಸಿನಿಲೋಕದ ಧ್ರುವತಾರೆ ಡಿಕ್ಕಿ ಮಾಧವರಾವ್..



ರಂಗಭೂಮಿ ಕಲಾವಿದರಾದ ಡಿಕ್ಕಿ ಮಾಧವರಾವ್ ಅವರು ಚಲನಚಿತ್ರಗಳಲ್ಲಿ ಅಭಿನಯಿಸಿ ಹೆಸರು ಮಾಡಿದ ನಂತರವು ನಾಟಕಗಳಲ್ಲಿ ಅಭಿನಯಿಸುವುದನ್ನು ನಿಲ್ಲಿಸದ ಅಪರೂಪದ ಕಲಾವಿದ. ಎಸ್‌ಎಲ್‌ಎನ್ ಸಿಂಹ ನಿರ್ದೇಶನದ 'ಸಂಸಾರ ನೌಕ' ಚಿತ್ರದ ಮೂಲಕ ಚಿತ್ರರಂಗ ಪ್ರವೇಶಿಸಿದ 'ಸಂಸಾರ ನೌಕ' ನಾಟಕಗಳಲ್ಲಿ ಅಭಿನಯಿಸುತ್ತಿದ್ದ ಇಬ್ಬರು ಮಾಧವರಾವ್‌ಗಳು ಆದ ಕಾರಣ ರಂಗಭೂಮಿಯಲ್ಲಿ ಪಾತ್ರದ ಹೆಸರಿನಲ್ಲಿ ಕರೆಯುತ್ತಿದ್ದಂತೆ ಒಬ್ಬರನ್ನು ಡಿಕ್ಕಿ ಮಾಧವರಾವ್ ಇನ್ನೊಬ್ಬರನ್ನು ತಮಾಷ ಮಾಧವರಾವ್ ಎಂಬುದಾಗಿ ಚಿತ್ರರಂಗದಲ್ಲಿ ಪುನರುಚ್ಚರಿಸಲಾಯಿತು. ಚಿತ್ರದ ಹೆಸರಿನೊಂದಿಗೆ ಆ ಚಿತ್ರದಲ್ಲಿ ಅಭಿನಯಿಸಿದ ಕಲಾವಿದರ ಹೆಸರುಗಳು ಜನಜನಿತವಾಗುವುದು ಸರ್ವೇ ಸಾಮಾನ್ಯ. ಆದರೆ ಮಾಡಿದ ಪಾತ್ರದ ಹೆಸರಿನೊಂದಿಗೆ ಕಲಾವಿದರ ಹೆಸರು ಪರಚಲಿತದಲ್ಲಿರುವುದು ತೀರ ವಿರಳ. ಆದರೆ ಡಿಕ್ಕಿ ಮಾಧವರಾವ್ ಪಾತ್ರದ ಹೆಸರಿನೊಂದಿಗೆ ಗುರುತಿಸಲ್ಪಟ್ಟ ಮೊದಲ ಕಲಾವಿದ ಎಂದು ಹೇಳಬಹುದು. 1936ರಲ್ಲಿ ದಕ್ಷಿಣ ಭಾರತದಲ್ಲಿಯೇ ಮೊದಲ ಸಾಮಾಜಿಕ ಚಿತ್ರವಾಗಿ ಮೂಡಿ ಬಂದ ಚಿತ್ರ 'ಸಂಸಾರ ನೌಕ'. ಈ ಚಿತ್ರದಲ್ಲಿ ಡಿಕ್ಕಿ ಮಾಧವರಾವ್ ಅಭಿನಯಿಸಿದ್ದು ಮಾತ್ರವಲ್ಲದೆ ಸಂಗೀತವನ್ನು ಕೂಡ ನೀಡಿದ್ದಾರೆ. 'ಸಂಸಾರ ನೌಕ' ಚಿತ್ರದಲ್ಲಿ ನಾಯಕನಾಗಿ ಪಾದಾರ್ಪಣೆಗೊಂಡ ಪಂತುಲು ಅವರು ಡಿಕ್ಕಿ ಮಾಧವರಾವ್ ಅವರಿಗೆ ಮೊದಲೇ ಪರಿಚಯವಿದ್ದ ಕಾರಣ ಸಿನಿಮಾ ಆದ ಮೇಲೆ ಮತ್ತಷ್ಟು ಹತ್ತಿರವಾಗುತ್ತಾರೆ. ಪಂತುಲು ಅವರು ಪದ್ಮಿಣಿ ಪಿಕ್ಚರ್ಸ್ ಲಾಂಛನದಲ್ಲಿ ನಿರ್ಮಿಸಿದ 'ಮೊದಲ ತೇದಿ' ಚಿತ್ರದಲ್ಲಿ ಒಂದರಿಂದ ಇಪ್ಪತ್ತರವರೇಗೂ ಉಂಡಾಟ ಎಂಬ ಸಾಹಿತ್ಯವಿದ್ದ ಹಾಡನ್ನು ಮಾಧವರಾವ್ ಹಾಡಿ ಯಶಸ್ವಿಯಾಗಿದ್ದಾರೆ. ಪಂತುಲು ಅವರ ಆತ್ಮೀಯತೆಯಿಂದಾಗಿ ಅವರ ಎಲ್ಲಾ ಚಿತ್ರಗಳಲ್ಲೂ




ಮಹತ್ವದ ಪಾತ್ರವನ್ನು ನಿರ್ವಹಿಸುತ್ತಾ ಬಂದಿರುವ ಡಿಕ್ಕಿ ಮಾಧವರಾವ್, ರಾಜ್‌ಕುಮಾರ್ ಅಭಿನಯದಲ್ಲಿ ಪಂತುಲು ಅವರು 'ಕಿತ್ತೂರುಚೆನ್ನಮ್ಮ" ಚಿತ್ರ ನಿರ್ಮಿಸಿದಾಗ ಅದರಲ್ಲಿ ಉತ್ತಮ ಪಾತ್ರವನ್ನು ಮಾಧವರಾವ್ ನಿರ್ವಹಿಸಿದ್ದಾರೆ. ಕಲ್ಪನಾ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದ 'ಸಾಕು ಮಗಳು' ಚಿತ್ರದಲ್ಲಿ ಅಣ್ಣಾವ್ರೊಂದಿಗೆ ಡಿಕ್ಕಿ ಮಾಧವರಾವ್ ಅವರ ಅಭಿನಯ ಮರೆಯಲಾಗದ್ದು. 'ರಾಮಾಂಜನೇಯಯುದ್ಧ' ಚಿತ್ರದಲ್ಲಿ ವಿಶ್ವಮಿತ್ರನ ಪಾತ್ರದಲ್ಲಿ ಡಿಕ್ಕಿ ಮಾಧವರಾವ್ ಅವರು ಅಮೋಘವಾಗಿ ಅಭಿನಯ ನೀಡಿದ್ದಾರೆ. ರಾಜ್‌ಕುಮಾರ್ ಭಾರತಿ ಅಭಿನಯದ 'ಎಮ್ಮೆ ತಮ್ಮಣ್ಣ' ಚಿತ್ರದಲ್ಲಿ ಖಳನಾಯಕನಾಗಿ ಅಭಿನಯಿಸಿದ್ದಾರೆ. ರಾಧಾ ರಮಣ, ವಾಣಿ, ಕೃಷ್ಣಲೀಲಾ, ಶಿವ ಪಾರ್ವತಿ, ಶಿವಶರಣೆ ನಂಬೆಕ್ಕ, ಭಕ್ತ ವಿಜಯ, ಭಕ್ತ ಮಾರ್ಕಂಡೇಯ, ರತ್ನಗಿರಿ ರಹಸ್ಯ, ವರದಕ್ಷಿಣೆ, ಸ್ಕೂಲ್ ಮಾಸ್ಟರ್, ಅಬ್ಬಾ ಆ ಹುಡುಗಿ, ಮಕ್ಕಳ ರಾಜ್ಯ, ಕಿತ್ತೂರು ಚೆನ್ನಮ್ಮ, ರಾಜಾ ಸತ್ಯವ್ರತ, ಗಾಳಿ ಗೋಪುರ. ಶ್ರೀ ಶೈಲ ಮಹಾತ್ಮೆ, ಶ್ರೀ ಧರ್ಮಸ್ಥಳ ಮಹಾತ್ಮೆ, ಜೀವನ ತರಂಗ, ಕನ್ಯಾರತ್ನ, ಪಾಲಿಗೆ ಬಂದದ್ದೆ ಪಂಚಾಮೃತ, ನವಕೋಟಿ ನಾರಾಯಣ, ಸರ್ವಜ್ಞ ಮೂರ್ತಿ, ಕಪ್ಪು ಮಾರುಕಟ್ಟೆ, ಧನ ಪಿಶಾಚಿ, ನಕ್ಕರೆ ಅದೇ ಸ್ವರ್ಗ, ಒಂದೆ ಬಳ್ಳಿಯ ಹೂಗಳು, ಹೂವು ಮುಲ್ಲು, ಲಕ್ಷಾಧೀಶ್ವರ, ಮನ್ನಿನಾ ಮಗ, ಸಿಂಹ ಸ್ವಪ್ನಾ, ಭಲೇ ಕಿಲಾಡಿ, ಅನುಗ್ರಹ, ಮುಕ್ತಿ, ನಮ್ಮ ಬದುಕು, ಜ್ವಾಲಾ ಮೋಹಿನಿ, ಚಾಮುಂಡೇಶ್ವರಿ ಮಹಿಮೆ, ಮಾಡಿ ಮಡಿದವರು, ಭಾಗ್ಯಜ್ಯೋತಿ, ಬಿಳಿ ಹೆಂಡ್ತಿ, ಮಹದೇಶ್ವರ ಪೂಜಾ ಫಲ ಹೀಗೆ ಬೇರೆ ಬೇರೆ ಚಿತ್ರಗಳಲ್ಲಿ ಅಭಿನಯಿಸಿದ ಡಿಕ್ಕಿ ಮಾಧವರಾವ್ ಅವರು ಕನ್ನಡ ಚಿತ್ರರಂಗದಲ್ಲಿ ನಲ್ವತ್ತು ವರ್ಷಗಳ ಕಾಲ ಸುಮಾರು ನೂರ ಇಪ್ಪತ್ತು ಚಿತ್ರಗಳಲ್ಲಿ ಬೇರೆ ಬೇರೆ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 1919 ಜನವರಿ ತಿಂಗಳ 15ರಂದು ಮೈಸೂರಿನಲ್ಲಿ ಜನಿಸಿದ ಮಾಧವರಾವ್ ತಂದೆ ಮುರಾರಿರಾವ್ ಅಮಲ್ದಾರ್ ರಾಗಿ ಕಾರ್ಯ ನಿರ್ವಹಿಸುತ್ತಿದ್ದವರು. ಎಸ್‌ಎಲ್‌ಎನ್ ಸಿಂಹ ಮತ್ತು ಮಹಮ್ಮದ್ ಪೀರ್ ಅವರುಗಳು ಮಾಧವರಾವ್ ಅವರು ಮೈಸೂರಿನ ವೆಸ್ಲಿ ಮಿಷನ್ಸ್ ಸ್ಕೂಲ್‌ನಲ್ಲಿ ಹೈಸ್ಕೂಲು ವ್ಯಾಸಾಂಗ ಮಾಡುತ್ತಿರುವಾಗ ಅವರಿಗೆ ಸೀನಿಯರ್ ಆಗಿದ್ದವರು.




ಮಾಧವರಾವ್ ಅವರು ಬಾಲ್ಯದಿಂದಲೇ ನಾಟಕಗಳಲ್ಲಿ ಅಭಿನಯಿಸುವ ಆಸಕ್ತಿ ಹೊಂದಿದ್ದರು. ಡಿಕ್ಕಿ ಮಾಧವರಾವ್, ಎಸ್‌ಎಲ್‌ಎನ್ ಸಿಂಹ, ಮಹಮ್ಮದ್ ಪೀರ್ ಈ ಎಲ್ಲಾ ಸ್ನೇಹಿತರು ಸೇರಿ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಒಂದು ನಾಟಕವನ್ನು ಮಾಡುತ್ತಾರೆ. ನಾಟಕವನ್ನು ನೋಡಲು ವರದಾಚಾರ್ಯರವರು ಬಂದಿರುತ್ತಾರೆ. ಮಾಧವರಾವ್ ಅವರ ಅಭಿನಯವನ್ನು ಕಂಡು ವರದಾಚಾರ್ಯರವರು ರಾವ್ ಅವರನ್ನು ತನ್ನ ರತ್ನಾವಳಿ ನಾಟಕ ಕಂಪನಿಗೆ ಸೇರಿಸಿಕೊಳ್ಳುತ್ತಾರೆ. ಚಂದ್ರಕಲಾ ನಾಟಕ ಕಂಪನಿ, ಗುಬ್ಬಿ ವೀರಣ್ಣ ನಾಟಕ ಕಂಪನಿ, ಚಾಮುಂಡೇಶ್ವರಿ ನಾಟಕ ಸಭಾ ಹೀಗೆ ಹಲವಾರು ವೃತ್ತಿ ನಾಟಕ ಕಂಪನಿಗಳಲ್ಲಿ ಕಲಾ ಸೇವಕನಾಗಿ ದುಡಿದ ಡಿಕ್ಕಿ ಮಾಧವರಾವ್ ಅವರು 1979 ಮಾರ್ಚ್ 21 ನೇ ತಾರೀಕು ಚಳ್ಳಕೆರೆಯಲ್ಲಿ ಸದಾರಮೆ ನಾಟಕದಲ್ಲಿ ಅಭಿನಯಿಸುವಾಗ ರಾವ್ ಅವರಿಗೆ ಲಕ್ವಾ ಹೊಡೆದ ಪರಿಣಾಮವಾಗಿ ಒಂದು ಕಾಲು ಸ್ವಾಧೀನ ಹೋಗುತ್ತದೆ. ಆನಂತರ ಆರು ವರ್ಷಗಳ ಕಾಲ ಹಾಸಿಗೆಯಲ್ಲೇ ಇರಬೇಕಾಗುತ್ತದೆ. ಅನಾರೋಗ್ಯದಿಂದ ಬಳಲುತ್ತಿದ್ದ ರಾವ್ ಅವರು 1985ರ ಜುಲೈ 14ನೇ ತಾರೀಖು ಇಹಲೋಕ ತ್ಯಜಿಸುತ್ತಾರೆ. ಇವರಿಗೆ ಇಬ್ಬರು ಗಂಡು ಮತ್ತು ಮೂರು ಹೆಣ್ಣು ಮಕ್ಕಳು. ರಂಗಭೂಮಿ ಹಾಗೂ ಚಿತ್ರರಂಗದಲ್ಲಿ ಅಪಾರ ಸೇವೆ ಸಲ್ಲಿಸಿದ ಡಿಕ್ಕಿ ಮಾಧವರಾವ್ ಅವರು ಕರಾವಳಿ ತರಂಗಿಣಿ ಪತ್ರಿಕೆಯ ಈ ವಾರದ ಸಿನಿಲೋಕದ ಧ್ರುವತಾರೆಯಾಗಿದ್ದಾರೆ.









ಎನ್ನಾರ್ ಕೆ ವಿಶ್ವನಾಥ್
ENNAR K VISHWANATH







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021